O.S. No. 45/21
PW-1

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 27.07.2024**

**ಪಾಟೀ ಸವಾಲುಃ ಶ್ರೀ ಸಿ ಬಿ ಸಿ ವಕೀಲರಿಂದ ಪ್ರತಿವಾದಿ 3 ರಿಂದ 6 ರವರ ಪರವಾಗಿ**

ನನ್ನ ಅಜ್ಜ ಬಿದ್ದಪ್ಪನಿಗೆ ಚಿನ್ನಮ್ಮ ಒಬ್ಬರೇ ಹೆಂಡತಿ. ಚಿನ್ನಮ್ಮ ಮತ್ತು ಬಿದ್ದಪ್ಪನಿಗೆ ದೇವಮ್ಮ ಮತ್ತು ಲವಪ್ಪ ಎಂಬ ಇಬ್ಬರೂ ಮಕ್ಕಳು ಇದ್ದರು. ದೇವಮ್ಮ ಪ್ರಸ್ತುತ ಮೃತ ಪಟ್ಟಿದ್ದು ಅವರಿಗೆ ನಾಲ್ಕು ಜನ ಮಕ್ಕಳು. ಸದರಿ ನಾಲ್ಕು ಜನ ಮಕ್ಕಳಲ್ಲಿ ಪುಟ್ಟಯ್ಯ ಎಂಬ ಮಗ ಮೃತ ಪಟ್ಟಿರುತ್ತಾರೆ . ಪುಟ್ಟಯ್ಯನ ಹೆಂಡತಿ ಕಾವೇರಮ್ಮ ಪ್ರತಿವಾದಿ 3 ರವರು ಆಗಿದ್ದು ಅವರಿಗೆ ಮೂರು ಜನ ಮಕ್ಕಳಿದ್ದು ಅವರ ಪೈಕಿ ಒಂದು ಮಗ ಚಿನ್ನಪ್ಪ ಮೃತ ಪಟ್ಟಿರುತ್ತಾರೆ. ಪುಟ್ಟಯ್ಯ ಹಾಗೂ ಕಾವೇರಮ್ಮನ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮೃತ ಚಿನ್ನಪ್ಪನಿಗೆ ಪತ್ನಿ ಹಾಗೂ ಒಂದು ಮಗ ಇದ್ದು ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ದಾವಾ ಸ್ವತ್ತನ್ನು ನನ್ನ ಅಜ್ಜ ಬಿದ್ದಪ್ಪನವರು ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ಜೀವಂತವಿರುವಾಗ ಅವರ ಮಕ್ಕಳ ಮಧ್ಯೆ ಯಾವುದೇ ವಿಭಾಗ ಮಾಡಿರುವುದಿಲ್ಲ. ನನ್ನ ಅಜ್ಜನ ಮರಣದ ನಂತರ ದಾವಾ ಸ್ವತ್ತು ನನ್ನ ತಂದೆಯ ಸ್ವಾಧೀನಕ್ಕೆ ಬಂದಿದ್ದು ಅವರು ಸಹ ದೇವಮ್ಮನವರಿಗೆ ಭಾಗ ನೀಡಿರುವುದಿಲ್ಲ. ನಾನು ಈಗಲೂ ದಾವಾ ಸ್ವತ್ತಿಗೆ ಹೋಗಿ ಬರುತ್ತೇನೆ . ದಾವಾ ಸ್ವತ್ತನ್ನು ಹೊರತು ಪಡಿಸಿ ನನ್ನ ಅಜ್ಜನಿಗೆ ಬೇರೆ ಸ್ವತ್ತು ಇರುವುದಿಲ್ಲ. ನನ್ನ ಅಜ್ಜನ ಮೂಲಕ ದೇವಮ್ಮನವರಿಗೆ

ನೀಡಬೇಕಾಗಿದ್ದ ಭಾಗವನ್ನು ನ್ಯಾಯಾಲಯದಲ್ಲಿ ನೀಡಿದರೆ ನನಗೆ ಯಾವುದೇ ಅಭ್ಯಂತರವಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರ ದ ನ್ಯಾ ದಂ, ಕುಶಾಲನಗರ